# ಮುನ್ನುಡಿ

ಕ್ರಿ. ಶ. ಹತ್ತನೆಯ ಶತಮಾನವು ಜೈನಧರ್ಮದ ಸುವರ್ಣಯುಗವಾಗಿದೆ. ಅಂದಿನ ರಾಜರೂ, ಸೇನಾಧಿಪತಿಗಳೂ, ಮಂತ್ರಿಮಾನ್ಯರೂ ಜೈನಧರ್ಮಪ್ರಭಾವನೆಗಾಗಿ ತಮ್ಮ ಬಾಳಿನ ಬಹುಭಾಗವನ್ನು ಮೀಸಲಾಗಿಟ್ಟಿದ್ದರು. ಇಮ್ಮಡಿ ಭೂತುಗ, ಪುಣಿಸೆಯ ಮರುಳ, ನೊಳಂಬಾಂತಕ (ಮಾರಸಿಂಹ), ಚಾವುಂಡರಾಯ, ರಾಷ್ಟ್ರಕೂಟರ ಸೇನಾದಿಪತಿ ಶಂಕರ ಗಂಡ ಇವರೆಲ್ಲರೂ ನಡೆದಾಡುವ ಕಲ್ಪತರುಗಳಾಗಿದ್ದರು, ತೊರೆಬಿಟ್ಟ ಕಾಮಧೇನುಗಳಾಗಿದ್ದರು, ಮಾತಾಡುವ ಚಿಂತಾಮಣಿಗಳಾಗಿದ್ದರು, ಧರ್ಮಾನುರಾಗಿಗಳೂ ಸಮ್ಯಕ್ತ್ವ ಚೂಡಾಮಣಿಗಳೂ ಆದ ಇವರು ಜೈನಧರ್ಮ ಪ್ರಭಾವನಾ ಪ್ರಭಾಕರರಾಗಿದ್ದರು. ಇವರೆಲರೂ ಒಟ್ಟಾಗಿ ಮಾಡಿದ ಧಾರ್ಮಿಕ ಕೈಂಕರ್ಯವನ್ನು ಅಂದಿನ ಕನ್ಯಾ ಕೌಸ್ತುಭವವಾದ ಅತ್ತಿಮಬ್ಬೆ ಒಬ್ಬಳೇ ಮಾಡಿ ದಾನಚಿಂತಾಮಣಿ ಎಂಬ ಹೆಸರನ್ನು ಪಡೆದಳು* ಎಂದು ರನ್ನ ಕವಿಯು ಅತ್ತಿಮಬ್ಬೆಯ ಧಾರ್ಮಿಕ ಕಯಕಕ್ಕೆ ಕಿರೀಟತೊಡಿಸಿರುವನು.

ಅತ್ತಿಮಬ್ಬೆ ಮಹಾವೀರನ ನಿರ್ವಾಣೋತ್ಸವದ ನೆನಪಿಗಾಗಿ ೧೫೦೦ ಜಿನಾಲಯ ಕಟ್ಟಿಸಿದಳು. ಅಂದಿಗೆ ಮಹಾವೀರ ನಿರ್ವಾಣವಾಗಿ ೧೫೦೦ ವರ್ಷಗಳಾಗಿದ್ದಿತು. (ಈ ಅಭಿಪ್ರಾಯ ಶ್ರೀ ಎಂ. ಎ. ಜಯಚಂದ್ರ ಹೇಳಿದರು) ತನ್ನ ಕಣ್ಣಿಗೆ ಬಿದ್ದ ಜೈನ ಕಾವ್ಯಗಳನ್ನು ಸಹಸ್ರ ಸಹಸ್ರವಾಗಿ ಈಕೆ ಪ್ರತಿಮಾಡಿಸಿ ಒಂದು ಪವಾಡವೆಸಗಿದಳು. ೧೫೦೦ ಬಂಗಾರದ ಜಿನ ಬಿಂಬಗಳನ್ನು ಮಾಡಿಸಿ ಜಿನಭಕ್ತರಿಗೆ ದಾನ ಮಾಡಿದಳು.

ರನ್ನ ಕವಿಯನ್ನು ಸಾಕಿ ಸಲಹಿ ಕವಿಚಕ್ರವರ್ತಿಯಾಗುವಂತೆ ನೋಡಿಕೊಂಡಳು. ಕೃತಜ್ಞನಾದ ರನ್ನ ಈಕೆಯ ಭವ್ಯತಮ ಚರಿತವನ್ನೂ ಇತಿಹಾಸವನ್ನು ಅಜಿತ್ಪುರಾಣಕ್ಕೆ ಮುನ್ನುಡಿಯಾಗಿ ಬೆಸದು ಬಣ್ಣವಿಟ್ಟಿರುವನು. "ಈ ಅತ್ತಿಮಬ್ಬೆಯ ಬಾಳು ಬಿಳಿಯರಳೆ ಯಂತೆ ಶುಭ್ರವಾದುದು. ಗಂಗಾಜಲದಂತೆ ಪರಿದುದ್ದವಾದ. ಅಜಿತೆಸೇನ ಮುನಿ ಪತಿಯಗಿಣಾವಳಿಯಂತೆ ಇದು ಸಮ್ಯಕ್ತ್ವಶೀಲವಾದುದು; ಕೊಪಣಾಚಲದಂತೆ (ಕೊಪ್ಪಳ) ಈಕೆ ಜಂಗಮ ಜೈನಾತಿಶಯ ಕ್ಷೇತ್ರವಾಗಿದ್ದಳು. ಎಂದು ಕೊಂಡಾಡಿರುವನು. ** ಈಕೆ ರಣಚಂಡಿಯಾಗಿದ್ದಳು.

ಕೊಡಗೈದಾನಿಯಾಗಿದ್ದಳು. ಈಕೆಯಂಥ ಕಲಿಗಳಾಗಲಿ ಈಕೆಯಂಥ ಕೊಡುಗೈದಾನಿಯಾಗಲಿ ಮೀಸೆವೊತ್ತ ಅಣ್ಣಗಳಲ್ಲಿ ಯಾರಿ

* ಪಿರಿಯಂ ಭೂತುಗನಾತನಿಂ ಮರುಳನಾತಂಗಂ ।
ಪಿರಿಯಂ ನೆಟ್ಟನೆ ಧಾನಧರ್ಮಡೆಡೆಯೊಳ್ ಚಾವುಂಡರಾಯಂ ಕರಂ ॥
ಪಿರಿಯಂ ಶಂಕರ ಗಂಡನ ನಲ್ಪೆಪಿರಿಯಂ ತದ್ಭಾರಮಂ ಪೊತ್ತು ನಿ ।
ತ್ತರಿಸುತಿರ್ಪುದರಿಂದೆ ನೀನೆ ಪಿರಿಯ್ಕೆದಾನಚಿಂತಾಮಣಿ ॥

** ಬಿಳಿಯರಳೆಯಂತೆ ಗಂಗಾ । ಜಳದಂತೆಸವಜಿತಸೇನ ಮುನಿ ಪತಿಯ ಗುಣಾ ।
ವಳಿಯಂತೆ ನೆಗಳ್ದಾಕೊಪಣಾ । ಚಳದಂತೆ ಪವಿತ್ರ ಮತ್ತಿಮಬ್ಬೆಯ ಚರಿತಂ ॥

ರುವರು ?"* ಎಂದು ರನ್ನ ಇಡೀ ಪುರುಷ ಸಮುದಾಯಕ್ಕೆ ಸವಾಲು ಹಾಕಿರುವನು.

ಪಂಚಣಮೋಕಾರವು ಈಕೆಯ ಧಾರ್ಮಿಕ ಆಹಾರವಾಗಿದ್ದಿತು. ಧರ್ಮಪ್ರೇಮವು ಈಕೆಯ ಹೃದಯದ ತುಂಬ ತುಂಬಿ ತುಳುಕಾಡಿತು. ಈಕೆಯು ಜೀವಂತ ಣಮೋ ಕಾರವೇ ಆಗಿದ್ದಳು. ಈಕೆಯ ಧರ್ಮಪ್ರೇಮದ ಮುಂದೆ ಸಮವಸರಣ ನಿರ್ಮಾಪಕ ರಾದ ದೇವತೆಗಳು ನಾಚಬೇಕು. ಪಂಚನಮಸ್ಕಾರವೇ ಈಕೆಯ ಉಸಿರಾಟವಾಗಿದ್ದಿತು ಈಕೆಯ ನಾಡಿಯ ಮಿಡಿತವೆಂದರೆ ಪಂಚನಮಸ್ಕಾರದ ಮಿಡಿತವಾಗಿದ್ದಿತು ಈಕೆಯ ದೇಹದಲ್ಲಿದ್ದ ರಕ್ತವೆಲ್ಲವೂ ಭಕ್ತಿರಸವಾಗಿದ್ದಿತು.

"ಜಿನಪದಭಕ್ತೆಯೂ ಜಗತ್ರಯ ಜನವಂದಿತೆಯೂ, ಚಕ್ರವರ್ತಿ ಪೂಜಿತೆಯೂ, ಜಿನ ಶಾಸನ ರುಚಿಯೂ, ಸೇನಾಧಿಪತಿ ಅಣ್ಣಿಗನ ಜನನಿಯೂ ಆದ ಅತ್ತಿಮಬ್ಬೆಯು ಜಿನ ಜನನಿಗೆ ಸಮಾನವಾಗಿದ್ದಳು"** ಎಂದು ರನ್ನ ಉಬ್ಬಿ ಹೋಗುರುವನು. ಜಿನ ಜನನಿಯು ತನ್ನ ಗರ್ಬದಲ್ಲಿ ಜಿನಶಿಶುವಿಗೆ ಒಂಬತ್ತು ತಿಂಗಳು ಆಶ್ರಯ ನೀಡುವಳು. ಇತ್ತ ದಾನ ಚಿಂತಾಮಣಿ ಅತ್ತಿಮಬ್ಬೆಯ ಬಾಳಿನುದ್ದಕ್ಕೂ ತ್ರಿಕಾಲವರ್ತಿಯಾದ ೭೨ ಮಂದಿ ತೀರ್ಥಂಕರರನ್ನೂ ಹೃದಯದಲ್ಲಿ ಸ್ಥಾಪಿಸಿಕೊಂಡು ಭಕ್ತಿಯ ಜೋಗುಳ ಹಾಡಿರುವಳು. ಭಕ್ತಿಯ ಉಯ್ಯಾಲೆಯಲ್ಲಿ ಇವರನ್ನು ತೂಗಿರುವಳು. ಸಮ್ಯಕ್ತ್ವದ ಸುಪ್ಪತ್ತಿಗೆಯಲ್ಲಿ ಇವರನ್ನು ಪವಡಿಸಿ ಪುಲಕಗೊಂಡಿರುವಳು. ಆಗಾಗ ಈ ತೀರ್ಥಂಕರ ರನ್ನು ಜನರೂ ಕಾಣುವಂತಾಗಲ್ಲಿ ಎಂದು ಕರ್ನಾಟಕದ ಉದ್ದಗದ್ದಗಲದಲ್ಲೂ ಸಾವಿರದ

ಐನೂರು ಜಿನಾಲಯಗಳನ್ನು ನಿರ್ಮಿಸಿ ತೀರ್ಥಂಕರರಿಗೆ ಪಂಚಕಲ್ಯಾಣ ಮಾಡಿಸಿರುವಳು. ಜಿನವಾಣಿಯನ್ನು ರಕ್ಷಿಸಲು ಕಂಡ ಕಂಡ ಗ್ರಂಥವನ್ನೆಲ್ಲ ಸಹಸ್ರ ಸಹಸ್ರವಾಗಿ ಪ್ರತಿ ಮಾಡಿಸಿರುವಳು. ಸಹಸ್ರಾರು ಜಿನಮುನಿಗಳಿಗೆ ಆಹಾರದಾನ ಮಾಡಿರುವಳು. ಇವನ್ನೆಲ್ಲ ಗಮನಿಸಿದಾಗ ಅತ್ತಿಮಬ್ಬೆಯ ನಿಲುವಿಗೆ ಯಾವ ಜಿನ ಜನನಿಯೂ ಸಮನಗಲಾರಳಲ್ಲವೆ?

ಈಕೆಯ ಮಾತಾಪಿತರು ವೆಂಗಿಮಂಡಳದ ಕಮ್ಮೆದೇಶದ ಪುಂಗನೂರಿನವರು (ಚಿತ್ತೂರು ಜಿಲ್ಲೆ–ಆಂಧ್ರಪ್ರದೇಶ) ಈಕೆಯ ತಂದೆ ಮಲ್ಲಪ, ಚಿಕ್ಕಪ್ಪ ಪುನ್ನಮಯ್ಯ ಇವರು ರಾಷ್ಟ್ರಕೂಟರ ಮಹಾಸಾಮಂತನಾಗಿದ್ದ ತೈಲಪನ ಬಳಿ ದಂಡನಾಯಕರಾಗಿದ್ದರು. ಕೆಲವು ದಿನಗಳಲ್ಲಿ ತೈಲಪನು ಚಾಳುಕ್ಯ ಚಕ್ರವರ್ತಿಯಾದನು. ಈತನ ಮಹಾ ಮಂತ್ರಿ ದಲ್ಲಪ. ಈ ದಲ್ಲಪ್ಪನ ಮಗ ನಾಗದೇವ. ಇಭಿವನನ್ನು ಅವಳಿಜವಳಿಗಳಾಗಿದ್ದ ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ವರಿಸಿ ದಲ್ಲಪನ ಮನೆಗೆ ನಂದಾದೀವಿಗೆಗಳಾದರು.

* ಕಲಿಯೆನೆನೆಗಲ್ದ ಳ್ ಕಸವರ । ಗಲ್ಲಿಯೆನೆ ಗುಣದಂಕಕಾರ್ತಿ ಮೊನೆಯೊಳ್ ಮೊನೆಯೊಳ್ ॥

ಮೊಲೆವೊತ್ತ ತೈಲಜನನಿಯು । ಕೆಲದೊಳ್ ರಂಜಿಪರೆ ಮೀಸೆವೊತ್ತಣ್ಣಂಗಳ್ ॥

** ಜಿನಪದಭಕ್ತೆ ಜಗತ್ರಯ ಜನವಂದಿತೆ ಚಕ್ರವರ್ತಿ ಪೂಜಿತೆ ಜಿ ಶಾ ।

ಸನ ರುಚಿ ಪಡೆವಳ ತೈಲನ ಜನನಿಯೆ ತೀರ್ಥಂಕರ ಜನನಿಯೆನ್ನದರೊಳರೇ ॥

ಅತ್ತ ಮಬ್ಬೆ ಹುಟ್ಟಿದ್ದು ಪುಂಗನೂರಿನಲ್ಲಿ. ಮುಂದೆ ಬಾಳಿದ್ದು ಲಕ್ಕುಂಡಿಯಲ್ಲಿ. ಈಕೆಯ ತೌರುಮನೆ ಮತ್ತು ಗಂಡನ ಮನೆಯವರು ತೈಲಪನನ್ನು ಚಕ್ರವರ್ತಿ ಮಾಡಲು ಹುತಾತ್ಮರಾಗಿರುವರು. "ಮಲ್ಲಪನ ಕಡೆಯಿಂದ ಮೂರು ತಲೆಮಾರು,(ಮಲ್ಲಪ, ಪುನ್ನಮಯ್ಯ, ಗುಂಡುಮಯ್ಯ, ಅಣ್ಣಿಗ) ದಲ್ಲಪನ ಕಡೆಯಿಂದಲೂ ಮೂರು ತಲೆಮಾರು (ದಲ್ಲಪ, ನಾಗದೇವ, ಅಣ್ಣಿಗದೇವ) ವೀರರು ಚಾಳುಕ್ಯ ಚಕ್ರವರ್ತಿ ತೈಲಪ ಮತ್ತು ಇರಿವಬೆಡಂಗ ಸತ್ಯಾಶ್ರಯರ ಆಡಳಿತಾಂಗದಲ್ಲಿ ಉನ್ನತ ಅಧಿಕಾರದಲ್ಲಿದ್ದರು. ಈ ಪೀಳಿಗೆಯವರು ಹರಣವನ್ನು ಹುಲ್ಲುಕಡ್ಡಿಯಾಗಿಸಿ ಹೋರಾಡಿ ರಾಜನಿಷ್ಠೆಗೆ ಪಾತ್ರರಾಗಿದ್ದರು."*

ಚಾಮುಂಡರಾಯ ಬಾಹುಬಲಿಯನ್ನು ಕಡೆಸಿ ಮಹಿಮಾನ್ವಿತನಾದಂತೆ ರನ್ನನೂ ಅತ್ತಿಮಬ್ಬೆಯ ಜೀವನ ಚಿತ್ರವನ್ನು ಅಜಿತಿಪುರಾಣದಲ್ಲೂ,ಲಕ್ಕುಂಡಿ ಶಾಸನದಲ್ಲೂ ಚಿತ್ರಿಸಿ ಮಹಿಮಾನ್ವಿತನಾಗಿರುವನು. ವಿಶ್ವದ ಯಾವ ಸಾಹಿತ್ಯದಲ್ಲೂ ಅತ್ತಿಮಬ್ಬೆ ಯಂಥ ವ್ಯಕ್ತಿಚಿತ್ರವನ್ನು ನಾವು ಕಾಣಲಾರೆವು. ಮನೆಯಲ್ಲಿದ್ದುಕೊಂಡೇ ಅರ್ಯಿಕೆಯ ಬಾಳನ್ನು ಬಾಳಿದಳು. ತಲೆಯಮಾರುಗಳಿಂದ ರಾಶಿಯಾಗಿದ್ದ ಧನರಾಶಿಯನ್ನು ಧರ್ಮ ರಕ್ಷಣೆಗೆ, ಸಾಹಿತ್ಯದ ರಕ್ಷಣೆಗೆ, ಸಂಸ್ಕೃತಿಯ ರಕ್ಷಣೆಗೆ ನೀರಿನಂತೆ ವ್ಯಯಮಾಡಿದಳು. ಈಕೆಯ ನಾಮ ಜಪ ಮಾಡಿದರೂ ಸಾಕು ಬಡವ ಶ್ರೀಮಂತನಾಗುವನು. ನಾಸ್ತಿಕ ಆಸ್ತಿಕನಾಗುವನು.

ಅತ್ತಿಮಬ್ಬೆ ಕ್ರಿ. ಶ. ಸು. ೯೪೦ರಲ್ಲಿ ಜನಿಸಿ ಕ್ರಿ.ಶ. ಸು. ೧೦೧೫ರ ವರೆಗೂ ಬಾಳಿರಬಹುದು.

೬೫೭/೯ ಎ ಕ್ರಾಸ್, ವಿನಯಮಾರ್ಗ ಜಿ. ಬ್ರಹ್ಮಪ್ಪ

ಸಿದ್ದಾರ್ಥನಗರ, ಮೈಸೂರು ೫೭೦ ೦೧೧

ದೂರವಾಣಿ ೫೭೧೩೪೦

-------

*ಶ್ರೀ ಹಂಪನಾಗರಾಜಯ್ಯ, ಕವಿವರ ಕಾಮಧೇನು, ಪು ೬೨-೬೩